ಎಫ್.ಡಿ.ಪಿ. 30/2015 ಆರ್.ಡಬ್ಲೂಃ 2

ಸಾಕ್ಷಿಯನ್ನು ದಿಃ **21.02.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಆರ್.ಎಲ್. ವಕೀಲ**ರಿಂದ**

ನಿಆರ್. 1 ರ ದಾಖಲೆಗೆ ಸಹಿ ಮಾಡಿರುವವರೆಲ್ಲರೂ ಒಂದೆ ಬಾರಿ ಸಹಿ ಮಾಡಿಲ್ಲ, ಬೇರೆ ಬೇರೆ ಸಮಯಗಳಲ್ಲಿ ಸಹಿ ಮಾಡಿದ್ದಾರೆ. ನಿಆರ್. 1 ರ ದಾಖಲೆಗೆ ಮೊಟ್ಟ ಮೊದಲು ಅದನ್ನು ಬರೆದವರು ಸಹಿ ಮಾಡಿದ್ದಾರೆ, ಅವರು ಮಾಡಿದ 10-15 ನಿಮಿಷಗಳ ನಂತರ ಉಳಿದವರು ಸಹಿ ಮಾಡಿದ್ದಾರೆ. ಒಂದು ದಾಖಲೆಯು ನೋಂದಣಿಗೆ ಬರುವ ಪೂರ್ವದಲ್ಲೆ ಎಲ್ಲಾ ಪಕ್ಷಗಾರರು ಮತ್ತು ಸಾಕ್ಷಿದಾರರ ಸಹಿಗಳನ್ನು ಒಳಗೊಂಡಿರುತ್ತದೆ ಎಂದರೆ ಸರಿ. ದಾಖಲೆ ನೋಂದಣಿಗೆ ಕೊಟ್ಟ ನಂತರ ದಾಖಲೆ ನೋಂದಣಿ ಆಗಿ ಸಂಬಂಧಪಟ್ಟವರ ಫೋಟೋಗಳನ್ನು ತೆಗೆದುಕೊಂಡು ಅದು ದಾಖಲೆ ಮೇಲೆ ಪ್ರಿಂಟ್ ಆದ ನಂತರ ಪುನಃ ಸಹಿಗಾಗಿ ಕೊಡುತ್ತಾರೆ ಎಂದರೆ ಸರಿ. ಇಷ್ಟೆಲ್ಲಾ ಪ್ರೋಸೆಸ್ ಆದ ನಂತರ ದಾಖಲೆಗೆ ಸಹಿ ಮಾಡಿರುವ ಪಕ್ಷಗಾರರು ಮತ್ತು ಸಾಕ್ಷಿದಾರರು ಮಾತ್ರ ಈ ದಾಖಲೆಗೆ ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ. ದಾಖಲೆಯು ನೋಂದಣಿಗೆ ಬರುವ ಪೂರ್ವದಲ್ಲಿ ಅದರ ಪಕ್ಷಗಾರರ ಮತ್ತು ಸಾಕ್ಷಿದಾರರ ಸಹಿಗಳನ್ನು ಒಳಗೊಂಡಿತ್ತಾ ಎಂದರೆ ನನ್ನನ್ನು ಹೊರತು ಪಡಿಸಿ ಎಲ್ಲರೂ ಸಹಿ ಮಾಡಿದ್ದರು ಎನ್ನುತ್ತಾರೆ. ಎಲ್ಲಾ ಪಕ್ಷಗಾರರು ಮತ್ತು ಸಾಕ್ಷಿದಾರರು ಬಿಕಲಂದಾರರ ಕಛೇರಿಯಲ್ಲಿ ಸಹಿ ಮಾಡಿದ್ದರು. ಆ ಸಮಯದಲ್ಲೆ ಸದರಿ ದಾಖಲೆಗೆ ನಾನು ಸಹಿ ಮಾಡಲು ನನಗೇನು ತೊಂದರೆ ಇರಲಿಲ್ಲ. ದಾಖಲೆಯು ಭಾಷಾಂತರಕಾರರ ನೇರವಿನೊಂದಿಗೆ ತಯಾರಿಸಲ್ಪಟ್ಟಿದ್ದಲ್ಲಿ ಆ ರೀತಿ ದಾಖಲೆ ತಯಾರಾದ ನಂತರ ಭಾಷಾಂತರಕಾರರ ಸಹಿ ಕೂಡ ದಾಖಲೆಗೆ ಪಡೆದುಕೊಂಡಿರಬೇಕು ಎಂದರೆ ಸರಿ. ಯಾವುದೆ ದಾಖಲೆಯು ಭಾಷಾಂತರಕಾರರ ನೇರವಿನೊಂದಿಗೆ ಭಾಷಾಂತರಕಾರರನ್ನು ಸಂಬಂಧಪಟ್ಟ ಇಲಾಖೆಯಿಂದ ಕರೆಸಿಕೊಂಡಿರಬೇಕು ಎಂದರೆ ಇದನ್ನು ದಾಖಲೆ ಬರೆದ ಬಿಕಲಂದಾರರು ಹೇಳಬೇಕು.

ಈ ಪ್ರಕರಣದಲ್ಲಿ ನಿಆರ್. 1 ರ ದಾಖಲೆಯ ಬಿಕಲಂದಾರರು ಮರಣ ಹೊಂದಿದ್ದಾರೆ ಎಂದರೆ ಸರಿ.ಈ ಪ್ರಕರಣದಲ್ಲಿನ ದಾಖಲೆ ತಯಾರಾಗುವ ಸಮಯದಲ್ಲಿ ಭಾಷಾಂತರಕಾರರು ಇದ್ದರು ಆದರೆ ಅವರನ್ನು ಸಂಬಂಧಪಟ್ಟ ಇಲಾಖೆಯಿಂದ ಕರೆಸಿಕೊಂಡಿದ್ದರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಸದರಿ ಭಾಷಾಂತರಕಾರರ ಹೆಸರು ಮತ್ತು ವಿವರಗಳು ನನಗೆ ತಿಳಿದಿಲ್ಲ. ಸದರಿ ಭಾಷಾಂತರಕಾರರನ್ನು ನೋಂದಣಿ ಸಮಯದಲ್ಲಿ ಉಪನೋಂದಣಾಧಿಕಾರಿಯವರು ಕರೆಸಿಕೊಂಡು ವಿಚಾರ ಮಾಡಿದ್ದರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ . ದಾಖಲೆ ನೋಂದಣಿ ಸಮಯದಲ್ಲಿ ನಾನು ಅಲ್ಲಿ ಹಾಜರು ಇದ್ದಿದ್ದ ಪಕ್ಷದಲ್ಲಿ ಇವೆಲ್ಲಾ ವಿಚಾರಗಳು ನನಗೆ ತಿಳಿದಿರುತ್ತಿತ್ತು ಎಂದರೆ ಸರಿಯಲ್ಲ. ನಾನು ಅಲ್ಲಿದ್ದ ಕಾರಣದಿಂದಲೆ ಸಹಿ ಮಾಡಿದ್ದೇನೆ, ದಾಖಲೆಯು ನೋಂದಣಿಗೆ ಹೋಗಿ ಫೋಟೊ ತೆಗೆಯುವ ಹಂತದಲ್ಲಿ ನಾನು ಉಪನೋಂದಣಾಧಿಕಾರಿಯವರ ಕಛೇರಿಗೆ ಹೋಗಿದ್ದೆ.

ನಿಆರ್. 1 ದಾಖಲೆಯನ್ನು ತಯಾರು ಮಾಡುವ ಸಂದರ್ಭದಲ್ಲಿ ಆರ್. ಡಬ್ಲೂ 1ರವರು ಹಾಜರಿದ್ದರು, ನೋಂದಣಿ ಸಮಯದಲ್ಲಿ ನಾನು ಅವರನ್ನು ನೋಡಲಿಲ್ಲ. ಆರ್.ಡಬ್ಲ್ಯೂ1ರವರು ನನಗೆ ಸಂಬಂಧಿಕರಾಗಲಿ ಅಥವಾ ಸ್ನೇಹಿತರಾಗಲಿ ಆಗಿರುವುದಿಲ್ಲ. ನೋಂದಣಾಧಿಕಾರಿಯವರು ಬಾಷಾಂತರಕಾರರನ್ನು ಕರೆಸಿ ವಿಚಾರಣೆ ಮಾಡಿದ್ದೆ ಆಗಿದ್ದಲ್ಲಿ ಸದರಿ ಭಾಷಾಂತರಕಾರರ ಸಹಿ ನಿಆರ್. 6 ರ ದಾಖಲೆಯಲ್ಲಿ ಇರಬೇಕಾಗಿತ್ತು ಎಂದರೆ ಇರಬಹುದು. ನಿಆರ್. 1 ರ ದಾಖಲೆಯಲ್ಲಿ ಭಾಷಾಂತರಕಾರರ ಸಹಿಯಾಗಲಿ ಅಥವಾ ಸಾಕ್ಷಿದಾರರು ಎಂದು ಕಾಣಿಸಿರುವ 7 ನೇ ಪುಟದಲ್ಲಿ ನನ್ನ ಸಹಿಯಾಗಲಿ ಇರುವುದಿಲ್ಲ ಎಂದರೆ ಸಾಕ್ಷಿ ಕಣ್ತಪ್ಪಿನಿಂದ 7 ನೇ ಪುಟದಲ್ಲಿ ಸಾಕ್ಷಿದಾರನಾದ ನನ್ನ ಸಹಿ ಬಿಟ್ಟು ಹೋಗಿದೆ ಎನ್ನುತ್ತಾರೆ.ದಾಖಲೆಯಲ್ಲಿ ಸಾಕ್ಷಿದಾರರ ಎಲ್ಲಾ ವಿವರಗಳು ನಮೂದಾಗಿರಬೇಕು ಎಂದರೆ ದಾಖಲೆ ಸ್ಕ್ಯಾನ್ ಆಗುವ ಪೂರ್ವದಲ್ಲಿ ಸಾಕ್ಷಿದಾರರಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಬದಲಾವಣೆ ಮಾಡಿಕೊಳ್ಳಬಹುದು ಎನ್ನುತ್ತಾರೆ. ನಿಆರ್. 1 ರ ದಾಖಲೆ ಸ್ಕ್ಯಾನ್ ಆದ ನಂತರವಷ್ಟೆ ನೋಂದಣಿ ಆಗಿದೆ.

ನನಗೆ ನಿಆರ್ .1 ರ ದಾಖಲೆ ಬಗ್ಗೆ ಏನೂ ಗೊತ್ತಿಲ್ಲ, ದಾಖಲೆ ನೋಂದಣಿ ಆದ ನಂತರ ನಿಆರ್. 1(ಎ) ಸಹಿಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೆ ಒಂದು ಮರಣ ಶಾಸನಕ್ಕೆ ಸಾಕ್ಷಿದಾರರು ಸಹಿ ಮಾಡುವುದು ಅತ್ಯವಶ್ಯಕವಾಗಿರುತ್ತದೆ ಎಂದರೆ ಸರಿ. ದಾಖಲೆಯು ತಯಾರಾಗುವ ಸಮಯದಿಂದ ಹಿಡಿದು ಅದು ನೋಂದಣಿ ಆಗುವವರೆಗೂ ಸದರಿ ಸಾಕ್ಷಿದಾರರು ಹಾಜರಿರಬೇಕಾಗುತ್ತದೆ ಎಂದರೆ ಅವಶ್ಯಕತೆ ಇಲ್ಲ. ನಿಆರ್. 1 ರ ದಾಖೆ ಬರೆದುಕೊಟ್ಟಿದ್ದಾರೆ ಎನ್ನಲಾದ ವ್ಯಕ್ತಿಗಳು ಆ ಸಮಯದಲ್ಲಿ ವಿಲ್ ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಅವರ ಇಚ್ವೆಯಿಂದ ಈ ದಾಖಲೆ ತಯಾರಾಗಿಲ್ಲ , ನಿಆರ್, 1 ಯಾವುದೆ ಒಕ್ಕಣೆಯನ್ನು ಸದರಿ ಪಕ್ಷಗಾರರು ಹೇಳಿಲ್ಲ, ನಾನು, ಸದರಿ ದಾಖಲೆಯ ಬಿಕಲಂದಾರರು, ಮತ್ತು ಆರ್ ಡಬ್ಲ್ಯೂ 1 ಹರಿಕೃಷ್ಣ ರವರು ಷಾಮಿಲಾಗಿ ನಿಆರ್ 1 ರ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾಖಲೆಯನ್ನು ಸೃಷ್ಟಿಸಿರುವ ನಾನು ಆರ್. ಡಬ್ಲ್ಯೂ 1 ರವರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್ 1 ರ ದಾಖಲೆ ಬರೆಯುವಾಗ ನಾನು ಹಾಜರರಿರಲಿಲ್ಲ ಪಕ್ಷಗಾರರ ಸಮಕ್ಷಮ ನಾನು ಸಹಿ ಮಾಡಿಲ್ಲ, ಅದಾಗ್ಯೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.